ಕರ್ನಾಟಕ ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಚಿತ್ರದುರ್ಗ ಪ್ರಾದೇಶಿಕ ವಿಭಾಗ, ಚಿತ್ರದುರ್ಗ-577501

ದೂರವಾಣಿ ಸಂಖ್ಯೆ : 08194-230402 ಇ-ಮೇಲ್:dcf.cta@gmail.com


ಸಂಖ್ಯೆ:ಎ7/ಚಿಣ್ಣರವನದರ್ಶನ/ವಾ.ಕಿಯೋ/ಸಿಆರ್-01/2019-20 ದಿನಾಂಕ: 14-10-2019.

ಗೆ,

ವಲಯ ಅರಣ್ಯಾಧಿಕಾರಿಗಳು,
ಚಿತ್ರದುರ್ಗ, ಹೊಳಲ್ಕೆರೆ ಮತ್ತು ಮೊಳಕಾಲ್ಮೂರು ವಲಯಗಳು.

ವಿಷಯ : 2019-20 ನೇ ಸಾಲಿನಲ್ಲಿ ಚಿಣ್ಣರವನದರ್ಶನ ಯೋಜನೆ ಅನುಷ್ಠಾನಗೊಳಿಸುವ ಬಗ್ಗೆ.

ಉಲ್ಲೇಖ :
1. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ವನ್ಯಜೀವಿ), ಬೆಂಗಳೂರು ರವರ ಕಛೇರಿ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ:ಪ್ರಮುಅಸಂ/ವಜೀ/ಬಿ2/ಸಿಆರ್-1/2019-20 ದಿನಾಂಕ:03-09-2019.
2. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ವನ್ಯಜೀವಿ), ಬೆಂಗಳೂರು ರವರ ಕಛೇರಿ ಪತ್ರ ಸಂಖ್ಯೆ:ಪ್ರಮುಅಸಂ/ವಜೀ/ಬಿ2/ಸಿಆರ್ -1/2019-20 ದಿನಾಂಕ:23-05-2019.
3. ನಿಮ್ಮ ಪತ್ರ ಸಂಖ್ಯೆ: ಸಂ.ಕಾದಾಪ ವನ್ಯಜೀವಿದರ್ಶನ/2019-20 ದಿನಾಂಕ: 01-10-2019.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ಅಧಿಕೃತ ಜ್ಞಾಪನ ಪತ್ರದಲ್ಲಿ 2019-20 ನೇ ಸಾಲಿಗೆ ಈ ವಿಭಾಗದ ವ್ಯಾಪ್ತಿಗೆ ಒಳಪಡುವ ವಲಯಗಳಲ್ಲಿ ಗ್ರಾಮೀಣ ಶಾಲಾ ಮಕ್ಕಳಿಗೆ ಅರಣ್ಯ ಮತ್ತು ವನ್ಯಜೀವಿಗಳ ಮಹತ್ವದ ಕುರಿತು ಅರಿವು ಮೂಡಿಸುವ ಸಲುವಾಗಿ ಚಿಣ್ಣರ ವನದರ್ಶನ ಕಾರ್ಯಕ್ರಮ ಅನುಷ್ಠಾನಗೊಳಿಸಲು ಭೌತಿಕ, ಆರ್ಥಿಕ ಗುರಿ ನಿಗಧಿಯಾಗಿರುತ್ತದೆ. ಅನುಮೋದನೆಯಾದ ವಾರ್ಷಿಕ ಕ್ರಿಯಾ ಯೋಜನೆ ಪ್ರಕಾರ ಚಿತ್ರದುರ್ಗ ಉಪ-ವಿಭಾಗದಲ್ಲಿ ಅಂದರೆ ಚಿತ್ರದುರ್ಗ, ಹೊಳಲ್ಕೆರೆ ಮತ್ತು ಮೊಳಕಾಲ್ಮೂರು ವಲಯದಲ್ಲಿ ಚಿಣ್ಣರವನದರ್ಶನ ಕಾರ್ಯಕ್ರಮ ಅನುಷ್ಠಾನಗೊಳಿಸಲು ಚಿತ್ರದುರ್ಗ, ಹೊಳಲ್ಕೆರೆ ಮತ್ತು ಮೊಳಕಾಲ್ಮೂರು ವಲಯಕ್ಕೆ ಒಂದರಂತೆ ಒಟ್ಟು 3 ಕಾರ್ಯಕ್ರಮಗಳನ್ನು ನಿಗಧಿಪಡಿಸಲಾಗಿದ್ದು, ಸದರಿ ಕಾರ್ಯಕ್ರಮಗಳನ್ನು Secretary, Centre for Rural Development and Environment Action (CORDEA) 1153/4, ಶಿವಕುಮಾರಸ್ವಾಮಿ ಬಡಾವಣೆ, 2ನೇ ಹಂತ, ದಾವಣಗೆರೆ ಸಂಸ್ಥೆಯ ಮೂಲಕ ಅನುಷ್ಠಾನಗೊಳಿಸಲು ಅವಕಾಶ ನೀಡಲು ಸದರಿ ಸಂಸ್ಥೆಯವರು ಈ ಕಛೇರಿಗೆ ಮನವಿ ಸಲ್ಲಿಸಿರುತ್ತಾರೆ. ಈಗಾಗಲೇ ಈ ವಿಭಾಗದ ಇತರೆ ವಲಯಗಳಲ್ಲಿ ಈ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿರುತ್ತಾರೆ.

ಆದುದ್ದರಿಂದ ಸದರಿ ಸಂಸ್ಥೆಯವರು ಮನವಿಯನ್ನಯ ಪರಿಶೀಲಿಸಿ ನಿಮ್ಮ ವಲಯದಲ್ಲಿ ಸದರಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಬಗ್ಗೆ ಸದರಿ ಸಂಸ್ಥೆಯವರೊಂದಿಗೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳಲು ತಿಳಿಸುತ್ತಾ, ಸದರಿ ಸಂಸ್ಥೆಯ ಮನವಿಯನ್ನು ಈ ಪತ್ರಕ್ಕೆ ಲಗತ್ತಿಸಿ ಮಾಹಿತಿಗೆ ಮತ್ತು ಮುಂದಿನ ಸೂಕ್ತ ಕ್ರಮಕ್ಕೆ ಕಳುಹಿಸಿದೆ.

(ಕೆ. ಚಂದ್ರಶೇಖರ ನಾಯಕ)
ಉಪ ಅರಣ್ಯ ಸಂರಕ್ಷಣಾಧಿಕಾರಿ,
ಚಿತ್ರದುರ್ಗ ವಿಭಾಗ, ಚಿತ್ರದುರ್ಗ

ಪ್ರತಿಯನ್ನು Secretary, Centre for Rural Development and Environment Action (CORDEA) 1153/4, ಶಿವಕುಮಾರಸ್ವಾಮಿ ಬಡಾವಣೆ, 2ನೇ ಹಂತ, ದಾವಣಗೆರೆ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.

Wildlife Let A7

ರವಾನಿಸಿದೆ.
19-10-19